**ಸಾಕ್ಷಿಯನ್ನು ದಿಃ *06/01/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀ ಬಿಎಜಿ ವಕೀಲರಿಂದ ಪ್ರತಿವಾದಿ ನಂ.1 ಮತ್ತು 2 ಪರವಾಗಿ.***

ನನ್ನ ಮತ್ತು ಪ್ರತಿವಾದಿ ನಂ.1 ಅನೀಲ ಇವರ ಮದುವೆ ಹಿರಿಯರು ಮಾಡಿರುವ ಮದುವೆ ಎಂದರೆ ನಿಜ. ನಮ್ಮ ಮದುವೆ ಜೂನ 2006 ನೇ ಇಸ್ವಿಯಲ್ಲಿ ಆಗಿರುತ್ತದೆ ಎಂದರೆ ನಿಜ. ಅದರಂತೆ ಸೆಪ್ಟೆಂಬರ 2007 ನೇ ಇಸ್ವಿಯಲ್ಲಿ ಶೀತಲ ಎನ್ನುವ ಮಗಳು ಹುಟ್ಟಿರುತ್ತಾಳೆ ಎಂದರೆ ನಿಜ. ಅಲ್ಲಿಯವರೆಗೂ ನಾನು ನನ್ನ ಗಂಡನ ಮನೆಯಲ್ಲಿ ಆರಾಮವಾಗಿ ಇದ್ದೆ ಎಂದರೆ ನಿಜ. ಪ್ರಸವ ಆದ ನಂತರ ವಿಶ್ರಾಂತಿಗೆ ನಾನು ನನ್ನ ತವರುಮನೆಗೆ ಹೋಗಿದ್ದೆ ಎಂದರೆ ನಿಜ. ನಂತರ ನಾನು ಮಗುವಿಗೆ 7 ತಿಂಗಳು ತುಂಬಿದ ನಂತರ ನನ್ನ ಗಂಡನ ಮನೆಗೆ ಮರಳಿ ಬಂದಿರುತ್ತೇನೆ ಎಂದರೆ ನಿಜ. ನಂತರ 1 ತಿಂಗಳು ಗಂಡನ ಮನೆಯಲ್ಲಿದ್ದು, ನಂತರ ಪುನಃ ನನ್ನ ತವರುಮನೆಗೆ ಹೋದೆ ಎಂದರೆ ನಿಜ. ನಂತರ ನಾನು ಯಾವತ್ತು ಸಹ ಗಂಡನ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ನಂತರ ನನ್ನ ಗಂಡನ ಮನೆಯವರು ಹಿರಿಯರೊಂದಿಗೆ ನಮ್ಮ ಮನೆಗೆ ರಾಜಿ ಸಂಧಾನಕ್ಕೆ ಬಂದರು ಎಂದರೆ ಸರಿಯಲ್ಲ. ಈ ವಿಷಯಕ್ಕಾಗಿ ನನ್ನ ಮಾವ 2007 ನೇ ಇಸ್ವಿಯಲ್ಲಿ ಮಾನಸಿಕ ತೊಂದರೆಯಿಂದ ತೀರಿಹೋದರು ಎಂಬ ಪ್ರಶ್ನೆಗೆ ಸಾಕ್ಷಿದಾರರು 2007 ನೇ ಇಸ್ವಿಯಲ್ಲಿ ತೀರಿಹೋಗಿದ್ದಾರೆ, ಆದರೆ ನನ್ನ ವಿಷಯಕ್ಕಾಗಿ ಅಲ್ಲ ಎಂದು ಉತ್ತರಿಸುತ್ತಾರೆ. ರಾಜಿ ಸಂಧಾನ ಮಾಡುವಾಗ ನಾವು ಅವ್ಯಾಚ ಶಬ್ದಗಳಿಂದ ಬೈದಿದಕ್ಕೆ ಮಾನಸಿಕವಾಗಿ ನೊಂದು ತೀರಿಹೋದರು ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ನನ್ನ ಹೆರಿಗೆಗಿಂತ ಮೊದಲೇ ತೀರಿಹೋಗಿದ್ದಾರೆ ಎಂದು ಹೇಳುತ್ತಾರೆ. ಈ ವಿಷಯ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಧಾರವಾಡದ ಸಿವಿಲ್ ನ್ಯಾಯಾಲಯದಲ್ಲಿ ವೈವಾಹಿಕ ಜೀವನ ಪುನರಸ್ಥಾಪನೆಗೆ ಎಂ.ಸಿ.ನಂ.79/2010 ಪ್ರಕರಣವನ್ನು ಹೂಡಿದ್ದರು ಎಂದರೆ ನಿಜ. ಅದರಲ್ಲಿ ನನಗೆ ನೋಟೀಸು ಸಹ ಜಾರಿಯಾಗಿರುತ್ತದೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಾನು ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಂತರ ಖಾನಾಪೂರ ನ್ಯಾಯಾಲಯದಲ್ಲಿ ಡಿ.ವಿ ಆ್ಯಕ್ಟನಲ್ಲಿ ಕ್ರಿಮಿನಲ್ ಮಿಸಲೇನಿಯಸ ನಂ.130/2010 ರನ್ನು ಹೂಡಿರುತ್ತೇನೆ ಎಂದರೆ ನಿಜ. ಸಾಕ್ಷಿದಾರರು ಸದರಿ ಪ್ರಕರಣ ಎಂ.ಸಿ.ನಂ.79/2010 ರ ಮೊದಲೇ ಹೂಡಿದ್ದು ಇರುತ್ತದೆ ಎಂದು ಹೇಳುತ್ತಾರೆ.

ನನ್ನ ಮಗಳು ವಾದಿ ನಂ.1 ಇವಳ ಜನ್ಮ ದಿ:04-09-2007 ಇರುತ್ತದೆ. ದಿ:03-09-2025 ರಂದು ನನ್ನ ಮಗಳಿಗೆ 18 ವರ್ಷಗಳು ತುಂಬುತ್ತವೆ ಎಂದರೆ ನಿಜ. ಸದರಿ ದಾವೆಯನ್ನು ನಾನು ನನ್ನ ಮಗಳ ಸಂರಕ್ಷಳು ಎಂದು ಹೂಡಿದ್ದು ಇರುತ್ತದೆ ಎಂದರೆ ನಿಜ. ಆದ್ದರಿಂದ ನನ್ನ ಮಗಳು ವಯಸ್ಕಳು ಆದ ಕಾರಣ ನಾನು ವಾದಪತ್ರವನ್ನು ತಿದ್ದುಪಡಿ ಮಾಡಬೇಕು ಮತ್ತು ಅವಳ ಪರವಾಗಿ ಸಾಕ್ಷ ನುಡಿಯಲು ಅಧಿಕಾರವಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಉತ್ತರ ನೀಡದೆ ಸುಮ್ಮನೆ ಇರುತ್ತಾರೆ.

***ಈ ಹಂತದಲ್ಲಿ ಸದರಿ ಕಾರಣಕ್ಕಾಗಿ ಉಭಯ ಪರ ವಕೀಲರ ಸಮಯ ಕೋರಿದ ಕಾರಣ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.